ಅಭಿನಯಿಸುತ್ತಿದ್ದ ಸ್ವಾತಿಷ್ಟ ಅವರ ಬಣ್ಣದ ಕನಸುಗಳಿಗೆ ಇನ್ನಷ್ಟು ಬಲ ನೀಡಿತ್ತು.

‘ನಾನು 4–5ನೇ ತರಗತಿಯಲ್ಲಿದ್ದಾಗಲೇ ಜಾಹೀರಾತುಗಳಲ್ಲಿ ಅಭಿನಯಿಸಲು ಆರಂಭಿಸಿದೆ. 8ನೇ ತರಗತಿವರೆಗೂ ಹಲವು ಜಾಹೀರಾತುಗಳಲ್ಲಿ ಅಭಿನಯಿಸಿದೆ. ಕಾಲೇಜಿಗೆ ಬರುತ್ತಿದ್ದಂತೆ ಮಾಡೆಲಿಂಗ್‌ನಲ್ಲಿ ತೊಡಗಿಕೊಂಡೆ. ಎಂಜಿನಿಯರಿಂಗ್ ಮಾಡಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಗೆ ಬಂದೆ. ಆಗಲೂ ಹಲವು ಜಾಹೀರಾತುಗಳಲ್ಲಿ ಅಭಿನಯಿಸಿದೆ. ಆಭರಣಗಳ, ಉಡುಪುಗಳ ಮಾಡೆಲಿಂಗ್ ಮಾಡುತ್ತಿದ್ದೆ. ಒದಿನ ನಂತರ ಪತ್ರಿಕೆಯೊಂದಕ್ಕೆ ಸೇರಿಕೊಂಡಾಗ ಅಲ್ಲಿ ನಿರ್ದೇಶಕರನ್ನು ಭೇಟಿ ಮಾಡುವ ಸಂದರ್ಭಗಳು ಬರುತ್ತಿದ್ದವು. ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದರಿಂದ ನಿರ್ದೇಶಕರ ಪರಿಚಯ ಕಷ್ಟವಾಗಲಿಲ್ಲ’ ಎಂದು ತಾವು ನಟನೆಗೆ ಬಂದ ದಾರಿಯ ಪರಿಚಯ ಮಾಡಿಕೊಡುತ್ತಾರೆ.

ಸ್ವಾತಿಷ್ಟ ಅವರನ್ನು ಸಿನಿರಂಗಕ್ಕೆ ಬರಮಾಡಿಕೊಂಡಿದ್ದು ತಮಿಳಿನ ‘ಸವರಕತಿ’ ಸಿನಿಮಾ. ತಮಗೆ ಬ್ರೇಕ್ ಕೊಟ್ಟಿದ್ದು ಕಮಲ್ ಹಾಸನ್ ಅಭಿನಯದ ‘ವಿಕ್ರಮ್’ ಸಿನಿಮಾ. ಅಂಥ ನಟರೊಂದಿಗೆ ನಟಿಸಿದ್ದು ತಮ್ಮ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿದೆ ಎಂದು ಹೇಳಿಕೊಳ್ಳುತ್ತಾರೆ.

‘ಕಮಲ್ ಹಾಸನ್ ಅವರೊಂದಿಗೆ ನಟಿಸಿದ್ದು ನನ್ನ ಜೀವನದಲ್ಲಿ ಸಿಕ್ಕ ಅತ್ಯುತ್ತಮ ಅವಕಾಶ. ಅಷ್ಟು ಸಿನಿಮಾಗಳಲ್ಲಿ ಅಭಿನಯಿಸಿದ ಅನುಭವವಿದ್ದರೂ ಒಂದೊಂದು ಸೀನ್ ಮಾಡುವಾಗಲೂ ವಿವರವಾಗಿ ಎಲ್ಲವನ್ನೂ ತಿಳಿದುಕೊಳ್ಳುತ್ತಿದ್ದರು. ನಿರ್ದೇಶಕರಿಗೆ ಅತಿಯಾದ ಸಲಹೆ ಸೂಚನೆ ನೀಡದೇ ತಮಗೆ ಹೇಳಿದ್ದನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಕಿರಿಯರು ಹಿರಿಯ ಕಲಾವಿದರಿಂದ ಕಲಿಯಬೇಕಾದ ಗುಣಗಳು ಇವೆ ಅಲ್ಲವೇ’ ಎನ್ನುತ್ತಾರೆ.



ನಟಿ ಸೌಂದರ್ಯ ಅವರ ನಟನೆ ತುಂಬಾ ಮೆಚ್ಚುವ ಸ್ವಾತಿಷ್ಟ ಅವರಿಗೆ, ‘ರಿಯಲಿಸ್ಟಿಕ್ ಸಿನಿಮಾ’ಗಳಲ್ಲಿ ನಟಿಸುವ ಬಯಕೆ. ‘ವಿಕ್ರಮ್ ಸಿನಿಮಾ ನಂತರ ಒಂದೇ ತೆರನಾದ ಪಾತ್ರಗಳ ಆಯ್ಕೆಗಳು ಬರುತ್ತಿದ್ದವು. ಭಿನ್ನ ಭಿನ್ನ ಪಾತ್ರಗಳಲ್ಲಿ, ರಿಯಲಿಸ್ಟಿಕ್ ಸಿನಿಮಾಗಳಲ್ಲಿ ನಟಿಸುವ ಮನಸ್ಸು ನನ್ನದು. ಈಗೇನಿದ್ದರೂ ಚಿತ್ರಕಥೆಯೇ ಹೀರೊ. ಕಥೆ ಚೆನ್ನಾಗಿದ್ದರಷ್ಟೇ ಜನರನ್ನು ಹಿಡಿದಿಡಲು ಸಾಧ್ಯ. ಪ್ರೇಮಕಥೆಯೇ ಇದ್ದರೂ ಅದು ವಾಸ್ತವಿಕವಾಗಿರಬೇಕು. ಕೃತಕವೆನಿಸಿದ, ಅತಿ ನಾಟಕೀಯವೆನಿಸುವುದಕ್ಕಿಂತ ಸಹಜ ಅಥವಾ ನೈಜ ಕಥೆಗಳಿದ್ದರೆ ಜನರನ್ನು ಬೇಗ ತಲುಪುತ್ತವೆ. ಅಂಥ ಕಥೆಗಳಲ್ಲಿ ಪಾತ್ರವಾಗುವುದು ನನಗಿಷ್ಟ. ಅಂಥ ಕಥೆಗಳಿಗೆ ಮನ್ನಣೆ ನೀಡುವಂಥ ನಿರ್ದೇಶಕರೊಂದಿಗೆ ಕೆಲಸ ಮಾಡಬೇಕು’ ಎಂದು ತಮ್ಮ ನಿರೀಕ್ಷೆಗಳನ್ನು ಹೇಳಿಕೊಳ್ಳುತ್ತಾರೆ.

‘ಪ್ರತಿ ಹೊಸ ನಟಿಗೂ, ಒಳ್ಳೆ ಹೆಸರು ಮಾಡಿದ ನಿರ್ದೇಶಕರೊಂದಿಗೆ, ನಟರೊಂದಿಗೆ ಕೆಲಸ ಮಾಡಬೇಕೆಂಬ ಹಂಬಲ ಸಹಜ. ಹಾಗೆಯೇ ನನಗೂ. ಪುನೀತ್ ಸರ್ ಜೊತೆ ಕೆಲಸ ಮಾಡಬೇಕು ಎಂಬ ದೊಡ್ಡ ಕನಸಿತ್ತು. ಅಂಥ ದೊಡ್ಡ ಸ್ಟಾರ್, ಪ್ರತಿಭಾವಂತ ನಟ, ನೃತ್ಯಗಾರನೊಂದಿಗೆ ನಟನೆ ಮಾಡುವುದು ಎಷ್ಟೋ ಹೊಸ ನಟಿಯರ ದೊಡ್ಡ ಕನಸು. ಆ ಕನಸು ಹಾಗೇ ಉಳಿಯಿತು. ಆದರೆ ಅವರ ಕುಟುಂಬದ ವಿನಯ್ ರಾಜ್‌ಕುಮಾರ್ ಅವರೊಂದಿಗೆ ನಾನು ನನ್ನ ಮೊದಲ ಕನ್ನಡ ಸಿನಿಮಾ ಮಾಡುತ್ತಿದ್ದೇನೆ. ಅದೇ ಖುಷಿ’ ಎಂದು ಸಂತಸಗೊಳ್ಳುತ್ತಾರೆ.

ತಮ್ಮನ್ನು ತಾವು ಯಾವುದೇ ಪಾತ್ರಕ್ಕೂ ತಯಾರು ಮಾಡಿಕೊಳ್ಳಲು ಸಿದ್ಧ ಎನ್ನುವ ಸ್ವಾತಿಷ್ಟ, ‘ಒಟಿಟಿ ಬಂದ ನಂತರ ಸಾಕಷ್ಟು ಸಿನಿಮಾಗಳು ಬರುತ್ತವೆ. ಹಲವು ಹೇಳ ಹೆಸರಿಲ್ಲದಂತೆ ಹೋಗಿಬಿಡುತ್ತವೆ. ಹೀಗಾಗಿ ಒಳ್ಳೆ ಪಾತ್ರಗಳು ಸಿಕ್ಕರೆ ಮಾಡುತ್ತೇನೆ. ಕನ್ನಡದಲ್ಲಿ ಅದನ್ನೇ ನಾನು ನಿರೀಕ್ಷೆ ಮಾಡುತ್ತೇನೆ. ಯಾರ ತಂಡದಲ್ಲಿ ಜೊತೆ ಕೆಲಸ ಮಾಡುತ್ತೇವೆ ಎಂಬುದೂ ಬಹಳ ಮುಖ್ಯವಲ್ಲವೇ’ ಎನ್ನುತ್ತಾರೆ. ■



# ತಾಯಿ ಕಸ್ತೂರ್ ಗಾಂಧಿಗೆ ಪ್ರಶಸ್ತಿಗಳ ಗರಿ

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿರುವ ‘ತಾಯಿ ಕಸ್ತೂರ್ ಗಾಂಧಿ’ ಸಿನಿಮಾ, ಪ್ಯಾರಿಸ್‌ನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಸಿನಿಮಾಗೆ ‘ಶ್ರೇಷ್ಠ ಚಿತ್ರ’ ಹಾಗೂ ಗಾಂಧಿ ಪಾತ್ರಧಾರಿ ಕಿಶೋರ್ ಅವರಿಗೆ ‘ಶ್ರೇಷ್ಠ ನಟ’ ಪ್ರಶಸ್ತಿ ದೊರೆತಿದೆ. ಅಮೆರಿಕದ ಡಲ್ಲಾಸ್ ಚಿತ್ರೋತ್ಸವದಲ್ಲಿ ಈ ಚಿತ್ರಕ್ಕೆ ಅತ್ಯುತ್ತಮ ಸಂಕಲನಕ್ಕಾಗಿ ಪ್ರಶಸ್ತಿ ಲಭಿಸಿತ್ತು.

ಲಾಸ್ ಏಂಜಲೀಸ್ ‘ಸನ’ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಸಿನಿಮಾ ಪ್ರದರ್ಶನ ಕಂಡಿತ್ತು. 12ನೇ ದಾದಾ ಸಾಹೇಬ್ ಫಾಲ್ಕೆ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೂ ಈ ಚಿತ್ರ ಆಯ್ಕೆಯಾಗಿತ್ತು.

‘ಸುಧಾ’ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದ, ಬರಗೂರು ಅವರು ಬರೆದ ‘ಕಸ್ತೂರ್ ಬಾ Vs ಗಾಂಧಿ’ ಕಾದಂಬರಿಯನ್ನು ಈ ಚಿತ್ರವು ಆಧರಿಸಿದೆ. ‘ಕಸ್ತೂರ್ ಬಾ ತಾಯಿಯಾಗಿ ಮತ್ತು ಪತ್ನಿಯಾಗಿ ಎದುರಿಸಿದ ಬಿಕ್ಕಟ್ಟುಗಳು, ಅಪರೂಪದ ದಾಂಪತ್ಯ ಮತ್ತು ಸಾಮಾಜಿಕ ಕಾಳಜಿಗಳು ಸಿನಿಮಾದ ಮುಖ್ಯ ಕಥಾವಸ್ತು’ ಎಂದಿದ್ದಾರೆ ಬರಗೂರು.

ಕಸ್ತೂರ್ ಬಾ ಪಾತ್ರದಲ್ಲಿ ನಟಿ ಹರಿಪ್ರಿಯಾ ಹಾಗೂ ಗಾಂಧಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಿದ್ದಾರೆ. ಜನಮಿತ್ರ ಮೂವೀಸ್ ಬ್ಯಾನರ್ ಅಡಿ ಗೀತಾ ಅವರು ಈ ಚಿತ್ರ ನಿರ್ಮಿಸಿದ್ದಾರೆ. ■